**_ಹಿರಿಯ ಸಿವಿಲ್ ನ್ಯಾಯಾಧೀಶರು ವ ನ್ಯಾ ದಂ ಪ್ರ ವರ್ಗ ಮುದ್ದೇಬಿಹಾಳ ಮುದ್ದೇಬಿಹಾಳ.**

ಸಿ ಸಿ ನಂಃ 43ಃ2018

ಸಿ ಡಬ್ಲ್ಯು 3
ಪಿ ಡಬ್ಲ್ಯು 2

ಸಾಕ್ಷಿಯ ಹೆಸರು : ಸಂತೋಷ
ತಂದೆಯ ಹೆಸರು : ಇರಪ್ಪ ಅಂಗಡಗೇರಿ
ವಯಸ್ಸು : 29 ವರ್ಷ
ಉದ್ಯೋಗ : ಸೆಂಟ್ರಿಂಗ್ ಕೆಲಸ
ವಾಸಸ್ಥಳ : ಮುದ್ದೇಬಿಹಾಳ

(ಸಾಕ್ಷಿಯನ್ನು ಕರೆಯಿಸಿ ಈ ದಿವಸ ಅಂದರೆ ದಿನಾಂಕಃ 07-12-2019 ರಂದು ಪ್ರಮಾಣ ವಚನ ಭೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸ ಸ ಅ ಅವರಿಂದ**

6ನೇ ಆರೋಪಿ ಸಂತೋಷ ಅವರ ಪರಿಚಯ ಇದೆ. ಉಳಿದ ಆರೋಪಿತರ ಪರಿಚಯ ಇಲ್ಲ. ಚಾಸಾ-1, 2 ಮತ್ತು 4 ರಿಂದ 7 ರವರ ಪರಿಚಯ ಇದೆ. ಒಂದು ವರ್ಷದ ಹಿಂದೆ ಅಯ್ಯಪ್ಪ ಗುಡಿಯ ಬಳಿ ಇರುವ ಪ್ಲಾಟನಲ್ಲಿ ಜಗಳ ಆಗಿತ್ತು. ಆರೋಪಿತರ ಮತ್ತು ಚಸಾ-4 ರಿಂದ 7 ರವರ ನಡುವೆ ಜಗಳ ಆಗಿತ್ತು. ಆ ಸಂಬಂಧ ಪೋಲಿಸರು ಚಾಸಾ-1 ರವರ ಮನೆ ಬಳಿ ಮರುದಿನ ಕರೆದಿದ್ದರು. ಪೋಲಿಸರು ಪಂಚನಾಮೆ ತಯಾರಿಸಿ, ಬಡಿಗೆ , ರಾಡ್ ಮತ್ತು ಕಲ್ಲು ವಶಪಡಿಸಿಕೊಂಡರು. ಬೆಳಗ್ಗೆ 10 ಗಂಟೆ ಮೇಲೆ ಪೋಲಿಸರು ಬಂದಿದ್ದರು. ನನ್ನ ಜೊತೆ ಹುಲಗಪ್ಪ ಅವರು ಇದ್ದರು. ಚಾಸಾ-1 ಸ್ಥಳದಲ್ಲಿದ್ದರು. ಪೋಲಿಸರು ಮುದ್ದೆ ಮಾಲಿನ ಮೇಲೆ ಅಂಟಿಸಿದ ಚೀಟಿಗೆ ನನ್ನ ಹೆಬ್ಬೆಟ್ಟಿನ ಗುರುತು ಪಡೆದಿದ್ದಾರೆ. ಪಂಚನಾಮೆಗೂ ನನ್ನ ಹೆಬ್ಬೆಟ್ಟಿನ ಗುರುತು ಪಡೆದುಕೊಂಡಿದ್ದಾರೆ. ಪಂಚನಾಮೆ ಕಾಲದಲ್ಲಿ ಪೋಲಿಸರು ಪೋಟೋ ತೆಗೆದಿದ್ದಾರೆ.

ಚಾಸಾ-7 ರವರು ಪೊಲಿಸರಿಗೆ ಸ್ಥಳ ತೋರಿಸಿದರು. ಪಂಚನಾಮೆ ನೋಡುತ್ತಿದ್ದು ನಿಪಿ-2 ಎಂದು , ಪೋಟೋ ನಿಪಿ- 3 ಎಂದು ಗುರುತಿಸಲಾಯಿತು. ಮು ಮಾ-1 ರಿಂದ 8 ಪಂಚನಾಮೆ ಕಾಲದಲ್ಲಿ ವಶಪಡಿಸಿಕೊಂಡಿದ್ದಾರೆ.

<u>ಪಾಟೀ ಸವಾಲುಃ</u> ಶ್ರೀ ಎಂ ಬಿ ಬಿ ಆರೋಪಿ ಪರ ವಕೀಲರಿಂದಃ

ಮುದ್ನಾಳ ಸೀಮೆಯಲ್ಲಿರುವ ಪ್ಲಾಟನಲ್ಲಿ ಪಂಚನಾಮೆ ಬರೆದರು. ಭಾರತಿ ಹೇಳಿದ್ದು, ಪಂಚನಾಮೆಯನ್ನು ಪೋಲಿಸರು ಬರೆದರು. ಪಂಚನಾಮೆಯಲ್ಲಿ ಏನು ಬರೆ ದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾಕೆಂದರೆ ನನಗೆ ಓದು, ಬರಹ ಇಲ್ಲ. ಹೆಬ್ಬೆಟ್ಟಿನ ಗುರುತು ಹಾಕಿದ್ದೇನೆ. ಘಟನಾ ಸ್ಥಳದ ಚೆಕ್‌ಬಂದಿ ಗೊತ್ತಿಲ್ಲ. ಮು ಮಾ-1 ರಿಂದ 8 ಜಪ್ತಿ ಮಾಡಿಕೊಂಡಿದ್ದಾರೆ. ಮು ಮಾ -1 ರಿಂದ 8 ಬೇರೆ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ. ಮು ಮಾು-1 ರಿಂದ 8 ಪಂಚನಾಮೆ ಕಾಲದಲ್ಲಿ ಪೋಲಿಸರು ವಶಪಡಿಸಿಕೊಂಡರು ಎಂದು ಸುಳ್ಳು ಸಾಕ್ಷಿ ಹೇಳತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾ ದಿದಾರರ ಮಗನ ಸ್ನೇಹಿತನಾಗಿದ್ದು, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಯಾವುದೆ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಜಗಳವಾದ ಮರುದಿನ ಪಂಚನಾಮೆ ಮಾಡಿದ್ದಾರೆ. ಪಂಚನಾಮೆ ಕಾಲದಲ್ಲಿ ಪೋಟೋ ತೆಗೆ ದಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ನ್ಯಾ ದಂ ಪ್ರ ವರ್ಗ ಮುದ್ದೇಬಿಹಾಳ.